ಕಾಸರಗೋಡಿನವರಾದ ಗಣೇಶ್ ಪ್ರಸಾದ್ ಮಂಜೇಶ್ವರ ಕಥೆಗಾರರು. ಸಂಗೀತವೂ ಅವರಿಗೆ ಒಲಿದು ಬಂದುದರಿಂದ ಗೀತರಚನಕಾರರಾಗಿಯೂ ಗುರುತಿಸಿಕೊಂಡಿದ್ದಾರೆ. ಎಂ.ಎ, ಬಿ.ಎಡ್, ಎಂ.ಎಸ್ ಡಬ್ಲ್ಯೂ ಪದವೀಧರರು. ವೃತ್ತಿಯಲ್ಲಿ ಅಧ್ಯಾಪಕರು. 'ಸಾಕ್ಷಾತ್ಕಾರ' (ಕವನ ಸಂಕಲನ), 'ತಂತ್ರಾಗ್ನಿ' (ಕಾದಂಬರಿ) ಪ್ರಕಟವಾಗಿವೆ. ಡಿಜಿಟಲ್ ಮಾಧ್ಯಮದ ಮೂಲಕ ಅವರ ಎಂಟು ಕಾದಂಬರಿಗಳು ಬೆಳಕುಕಂಡಿವೆ.

ಆಗಿಬಿಡುವುದರಲ್ಲಿತ್ತು. ಸೋಹನಿ ಮತ್ತು ಪುರಿಯಾ ಹತ್ತಿರವೂ ಸುಳಿಯದಂತೆ ಸ್ಪುಟವಾಗಿ ಮಾರವಾ ಪ್ರಸ್ತುತಪಡಿಸುವ ಕಲೆ ಚಿಲ್ಲಾ ಮುಗಿದರೆ ಒಲಿದೇ ಒಲಿಯುತ್ತೆ. ಆದರೆ, ನದಿ ತಟದಲ್ಲಿ ರಾಗ ಮಾತ್ರವಲ್ಲ ಅನುರಾಗದ ಅಲೆಯೊಂದು ಹಿತವಾಗಿ ಒಮ್ಮೆ ಅವನ ಎದೆಗೆ ಅಪ್ಪಳಿಸಿತ್ತು. ಜೇನು ಗೂಡಿನೊಳಗಿಂದ ಹಿಂಡಿ ತೆಗೆದ ಸಿಹಿಯಾದ ಜೇನಿನಂಥ ಅವನ ಧ್ವನಿ ಕೇಳಿ ನೀರಿಗೆ ಬರುವ ಹೆಂಗಳೆಯರು ಕೆಲಸ ಮುಗಿಸಿ ಕೂಡಲೇ ಹೋಗದೆ ಅಲ್ಲೇ ಗುಂಪುಗೂಡಿ ಪಿಸುಮಾತುಗಳ ನಡುನಡುವೆ ಓರೆನೋಟ ಬೀರಿ ನೋಡುತ್ತ ನಿಲ್ಲುವುದು ಅವನು ಗಮನಿಸಿಯೂ ಗಮನಿಸದಂತೆ ಇದ್ದು ಬಿಡುವ ಸಾಮಾನ್ಯ ದೃಶ್ಯ. ಆದರೆ, ಜಮೀನುದಾರ ರಾಮ ಸಾಹುವಿನ ಮಗಳು ಸೋಹನಿ ಅವನನ್ನು ನೋಡುತ್ತಿದ್ದರೆ ಅವನಿಗೇನೊ ಖುಷಿ. ವೈರಾಗ್ಯದ ಛಾಯೆಯಿರುವ ಮಾರವಾ ರಾಗದ ನಡುವೆ ಶೃಂಗಾರ ರಾಗಿಣಿ ಸೋಹನಿ ಇಣುಕಿಬಂದು ಮಾರವಾದ ದಿಕ್ಕು ತಪ್ಪಿ ಹೋಗುವಂತೆ ಸೋಹನಿ ಮೂರು ನಾಲ್ಕು ದಿನಗಳೊಳಗೆ ಅವನ ಪಕ್ಕದಲ್ಲಿ ಕುಳಿತು ಸಂಗೀತ ಕೇಳುವಷ್ಟು ಸಲಿಗೆ ಪಡೆದಿದ್ದಳು. ವಾರಗೆಯ ಹುಡುಗಿಯರನ್ನು ಕಳುಹಿಸಿ ಒಬ್ಬಳೇ ಕೂರಲು ಸಹ ಅವಳಿಗೆ ಅಳುಕಿಲ್ಲ. 'ಶಾಲೆಗೆ ಬರುತ್ತಿದ್ದಾಗ ನೀನು ಹಾಡುತ್ತಿದ್ದಿಯಲ್ಲ ಕೇಳಿದ್ದೆ. ಆದರೆ, ಅಬ್ಬ! ಈಗ ಏನು ಹಾಡುತ್ತಿ ಮಿಹಿರ... ಇಲ್ಲೇ ಕೂರೋಣ ಅನ್ನಿಸುತ್ತೇ ಕೇಳಿದಷ್ಟು ಸಾಲದು' ಎಂದವಳಿಗೆ 'ಹಾಡು ಅಂದ್ರೆ ಅಷ್ಟು ಇಷ್ಟವಾ? ಉಸ್ತಾದರಿಗೆ ಹೇಳಲಾ? ನಾವಿಬ್ಬರೂ ಒಟ್ಟಿಗೆ ಕಲಿಯುವಾ' ಎಂದು ಮಿಹಿರ ಲಘುವಾಗಿ ಪ್ರಶ್ನಿಸಿದಾಗ ಆ ಮಾತಲ್ಲಿ ಇರುವ ಭಾವವನ್ನು ಗ್ರಹಿಸಿದ್ದಳು ಸೋಹನಿ. 'ಅಯ್ಯೋ ನನಗೆ ಹಾಡು ಬರಲ್ಲ, ನಿನ್ನ ಹಾಡು ಕೇಳೋದೇ ಇಷ್ಟ. ದಿನಾ ಕೇಳಬೇಕು ಅನ್ನಿಸುತ್ತೆ ಮಿಹಿರಾ' ಎನ್ನುತ್ತಿದ್ದಳು. ಬೆಳಗ್ಗೆ ಸ್ವರಸಾಧನೆ ಬೇಗ ಬಂದು ಮುಗಿಸಿ ಸೋಹನಿ ಬಂದ ಕೂಡಲೇ ಯಾವುದಾದರೂ ಶೃಂಗಾರ ಭರಿತ ಠುಮರಿಯನ್ನೋ ಗಝಲನ್ನೋ ಹಾಡಿ ಅವಳನ್ನು ಒಲಿಸಿ ಆಮೇಲೆ ಬಹಳ ಹೊತ್ತು ಮಾತಾಡಿ ಕೂರುತ್ತಿದ್ದರು ಇಬ್ಬರೂ. ನದೀ ತೀರದ ಸ್ವರ ಸಾಧನೆ ಲಯಬದ್ಧವಾಗಿ ಸಾಗುತ್ತಿದ್ದದ್ದು ಈಗ ಸಮ ತಪ್ಪಿದ ಅವರ್ತನದಂತೆ ಆಗಿತ್ತು. ಮಾರವಾ ಮರೆಗೆ ಸರಿದು ಸೋಹನಿ ಗರಿಬಿಚ್ಚಿತ್ತು. 'ನಾನು ಗಾಣೆಯಲ್ಲಿ ಚೆನ್ನಾಗಿ ತಾಲೀಮು ಮಾಡಿ ದರ್ಬಾರಿನ ಗವಾಯಿಯಾದರೆ ನಿನ್ನ ಅಪ್ಪ ಸಾಹು ನನಗೆ ಸಲಾಮು ಹೊಡೆಯುತ್ತಾನೆ ನೋಡುತ್ತಿರು ಸೋಹನಿ' ಎಂದು ಮಿಹಿರ ಒಮ್ಮೆ ಕೊಚ್ಚಿಕೊಂಡಾಗ 'ಹಾಗಾದರೆ ಆಗ ನೀನು ಬಂದು ಅಪ್ಪನಲ್ಲಿ ನನ್ನ ಕೇಳುತ್ತೀಯಾ ಮಿಹಿರಾ?' ಎಂದಾಗ ಸೋಹನಿ ತನ್ನ ಇಂಗಿತವನ್ನೂ ಅದಕ್ಕೆ ಇರುವ ಮಿತಿಯನ್ನೂ ಒಂದೇ ಮಾತಲ್ಲಿ ಸ್ಪಷ್ಟ ಪಡಿಸಿದ್ದಳು. ರಾಗಗಳ ಆಳಕ್ಕೇ ಹೋಗಿ ಅಭ್ಯಾಸವಿದ್ದ ಅವನಿಗೆ ಅನುರಾಗದ ಆಳ ಅಗಲ ಗೊತ್ತಿರಲಿಲ್ಲ. ಆದರೆ, ಸೋಹನಿ ಮತ್ತು ಬರಿಸುವಷ್ಟು ಮತ್ತೆ ಮತ್ತೆ ಕಾಡುತ್ತ ಅವನ ಒಳಗೆ ನಿರಂತರ ಮರುಕಳಿಸುವ ಸುಂದರ ಆಲಾಪವಾಗಿದ್ದಳು. ಮಾರವಾದ ಸಾಧನೆ ಅಲ್ಲಿಗಲ್ಲಿಗೆ ಕುಂಠಿತವಾಗಿತ್ತು. ನಡುನಡುವೆ ಸೋಹನಿಗೆ ಬರುತ್ತಿದ್ದ ನೆಂಟಸ್ತಿಕೆಗಳು ಅವರಿಬ್ಬರ ಪ್ರೇಮದ ನಡುವೆ ಅನ್ಯ ರಾಗ ಛಾಯೆ ತಂದು ಶ್ರುತಿಯೇ ತಪ್ಪಿಹೋಗುವ ಆತಂಕ ತಂದಿತ್ತು. ಆ ಹೊತ್ತಿಗೆ ಗುರು ವಿಧಿಸಿದ್ದ ಚಿಲ್ಲಾ ಮಿಹಿರನನ್ನು ಅಧೀರನನ್ನಾಗಿಸಿತ್ತು. ಗುರುವಿನ ಆಜ್ಞೆ ಮೀರುವಂತಿಲ್ಲ.

ಮಿಹಿರನ ಅಜ್ಜ ಲಖನ್ ಮಿಶ್ರಾ ಮುಘೀದ ಖಾನರ ಅಜ್ಜನ ಬಳಿ ಸಂಗೀತ ಕಲಿತಿದ್ದರಂತೆ. ಅಮೋಘ ಪ್ರತಿಭೆ ಅವರದ್ದು. ರಾಮಪುರ ದರ್ಬಾರಿನಲ್ಲೂ ಮಿಹಿರನ ಅಜ್ಜನಂಥ ಗಾಯಕ ಒಬ್ಬರೂ ಇಲ್ಲ ಎಂದು ನಾಲ್ಕು ತಾಲೂಕುಗಳಲ್ಲಿ ಸುದ್ದಿಯಾಗಿತ್ತು. ಆದರೆ, ವಿಧಿಯ ಆಟ ಬೇರೆಯೇ ಇತ್ತು. ಇಪ್ಪತ್ತೊಂದರ ತರುಣ ಕ್ಷಯರೋಗ ತಗುಲಿ ಒಂದೇ ವರ್ಷಕ್ಕೆ ಒಣಗಿದ ಮರದಂತೆ